## ಇಲ್ಲಿಯವರೆಗೆ



ಒಂದು ನೂತನ ಯೋಜನೆ ಬಗ್ಗೆ ಚರ್ಚೆ ನಡೆಯುತ್ತದೆ. ಚಂದ್ರನೆಡೆಗೆ ಪ್ರವಾಸ ಕೈಗೊಳ್ಳುವುದು, ಇದರ ಆಯ್ಕೆಗೆ ಅರೆಮಾನವ ಪಡೆಯ ಸಹಾಯ ಪಡೆಯುವುದು, ಈ ಬಗ್ಗೆ ಸಮಾಲೋಚನೆ ನಡೆಸುವುದು... ಇತ್ಯಾದಿ. ಅಲ್ಲಿಗೆ ಹೋಗುವವರಿಗೆ ವಿಶೇಷ ಸೌಲಭ್ಯ ಕಲ್ಪಿಸಿಕೊಡಬೇಕಾಗುತ್ತದೆ. ಮನರಂಜನೆಗಾಗಿ ತೆರಳಲು ಆಯ್ಕೆಯಾದವರ ಅದೃಷ್ಟವೆಂದೇ ಹೇಳಬೇಕು ಎನ್ನುತ್ತಾನೆ ಸವ್ಯಸಾಚಿ. ಈ ಮಧ್ಯೆ ಹನ್ನಾ ಅವಿರತ್‌ಗೆ ವಿದಾಯ ಹೇಳಿ ತನ್ನ ಆಪ್ತಸಹಾಯಕಿ ಶಮ್ಮಿಯ ಸಲಹೆಯಂತೆ ಹೆದ್ದಾರಿಯ ಆಸ್ಪತ್ರೆಯತ್ತ ತೆರಳುತ್ತಾಳೆ. ಅಲ್ಲಿ ಅಪಘಾತದಲ್ಲಿ ಗಾಯವಾಗಿರುವ ವ್ಯಕ್ತಿಯೊಬ್ಬನನ್ನು ಚಿಕಿತ್ಸೆಗಾಗಿ ಕರೆದೊಯ್ಯಲಾಗುತ್ತಿತ್ತು. ಮತ್ತೊಂದೆಡೆ ವ್ಯಕ್ತಿಯೊಬ್ಬನಿಗೆ ಪಿತ್ತಜನಕಾಂಗ ಹಾನಿಯಾಗಿದ್ದು, ಅಗತ್ಯವಾಗಿ ಅದರ ಕಸಿ ಮಾಡಬೇಕಾಗುತ್ತದೆ. ಕ್ರಿಟಿಕಲ್ ಕಂಡೀಷನ್‌ನಲ್ಲಿರುವ ರೋಗಿಯ ಬಗ್ಗೆ ವಿಚಾರಿಸುವ ಹನ್ನಾ, ಜೀರೊ ಟ್ರಾಫಿಕ್‌ಗೆ ವ್ಯವಸ್ಥೆ ಮಾಡಿ ಪಿತ್ತಜನಕಾಂಗ ಆಂಬ್ಯುಲೆನ್ಸ್ ಮೂಲಕ ಆದಷ್ಟು ಬೇಗ ಆಸ್ಪತ್ರೆ ತಲುಪುವಂತೆ ಮಾಡುತ್ತಾಳೆ. ಹನ್ನಾ ತನ್ನ ವಾಹನದ ಹಿಂಬದಿ ಆಸನದಲ್ಲಿ ಕುಳಿತ ಸಹಾಯಕ ರೊಬೋ ಕಾಪ್‌ಗಳೊಂದಿಗೆ ಹೊರಡುವಾಗ ಸಂಚಾರ ನಿಯಂತ್ರಣ ಕೇಂದ್ರಕ್ಕೆ ತನ್ನ ಲೊಕೇಷನ್ ಟ್ಯಾಗ್ ಮಾಡಿ ಮಾಹಿತಿ ರವಾನಿಸುವುದನ್ನು ಮರೆಯುವುದಿಲ್ಲ. ರೋಗಿಗೆ ಶಸ್ತ್ರಚಿಕಿತ್ಸೆಗೆ ಏರ್ಪಾಡು ಮಾಡುತ್ತಾಳೆ. ಆಂಬ್ಯುಲೆನ್ಸ್ ಆಸ್ಪತ್ರೆಗೆ ಇನ್ನೊಂದು ಗಂಟೆಯಲ್ಲಿ ತಲುಪಬಹುದು. ಅಲ್ಲಿಯವರೆಗೆ ಕ್ರಿಟಿಕಲ್ ಸ್ಥಿತಿಯಲ್ಲಿರುವ ವ್ಯಕ್ತಿ ಸಹಿಸಿಕೊಳ್ಳಬಲ್ಲನೇ ಎಂದು ಕೇಳುತ್ತಾಳೆ ಹನ್ನಾ. ಅಲ್ಲದೆ ಓಟಿ ರೂಂನಲ್ಲೇ ಬಹಳ ಹೊತ್ತು ಕಳೆಯುತ್ತಾ ಪರಿಶೀಲನೆ ನಡೆಸುತ್ತಾಳೆ.

'ಬಹುಶಃ ನಿಯಂತ್ರಣ ಕೇಂದ್ರದ ಡೇಟಾ ಸೆಂಟರ್ ನಮಗೆ ಈ ದಿನ ಸಂಜೆಯಷ್ಟರಲ್ಲಿ ಪಟ್ಟಿ ಬಿಡುಗಡೆ ಮಾಡಬಹುದು. ತಡವಾದರೆ ನಮಗೆ ಒಮ್ಮೆಂದೊಮ್ಮೆಲೇ ಎಲ್ಲರ ಪಟ್ಟಿಯನ್ನು ತುಲನೆ ಮಾಡುವುದು ತ್ರಾಸವಾಗಬಹುದು.'

ಅವಳ ಮುಂದಾಲೋಚನೆಗೆ ಅವಿರತ್, 'ಅಲ್ಲಿಗೆ ಸಹಾಯಕ್ಕಾಗಿ ನನ್ನ ಸಹಾಯಕ ರೊಬೋ ಕಾಪ್‌ಗಳನ್ನು ಜೊತೆಗೆ ಕರೆದುಕೊಂಡು ಹೋಗಬೇಕೆಂದರೂ ಆ ಪಡೆಯ ಸದಸ್ಯರಿಗೆ ಈ ರೋಬೋಗಳ ಮೇಲಿನ ದ್ವೇಷದಿಂದ ಮತ್ತೆ ಸಂಘರ್ಷಕ್ಕಿಳಿಯಬಹುದೆಂಬ ಸಣ್ಣ ಅಂಜಿಕೆ ನನಗೆ.'

'ಹೌದಲ್ಲವೇ. ಇದೊಳ್ಳೆಯ ಫಜೀತಿಯಾಯ್ತಲ್ಲ. ರೊಬೋ ಕಾಪ್‌ಗಳ ಸಹಾಯವಿಲ್ಲದೆ ಅಲ್ಲಿಗೆ ಪಡೆಯ ಸದಸ್ಯರಿಗೆ ತರಬೇತಿ ಆಯೋಜಿಸುವುದು ದುಸ್ತರವೇ.'

'ದುಸ್ತರ ಮಾತ್ರವಲ್ಲಾ. ಅಸಾಧ್ಯವೆಂದೇ ಹೇಳಬೇಕು.'

'ಹೇಗೆ?'

'ಡ್ರೈವಿಂಗ್ ಸ್ಕೂಲ್‌ನಲ್ಲಿನ ವ್ಯವಸ್ಥೆ ರೊಬೋಟೀಕರಣವಾಗಿರುವುದು ನಿನಗೆ ಗೊತ್ತಿಲ್ಲವೇ?' ಛೇಡಿಸಿದ.

'ಗೊತ್ತಿದೆ. ಈಗ ಈ ಪಡೆಯ ಸದಸ್ಯರ ಮೆಮೊರಿಯನ್ನು ರಿಫ್ರೆಷ್ ಮಾಡಬೇಕಾಗಿ ಬರಬಹುದು. ಇಲ್ಲದಿದ್ದರೆ ಅವರು ಪ್ರತಿ ಬಾರಿ ರೊಬೋಗಳನ್ನು ಎದುರಿಸಿದಾಗಲೆಲ್ಲ ವೈರಿಗಳನ್ನು ನೋಡಿದಂತೆ ಎಗರಾಡಿದರೆ ಹೇಗೆ?'

'ರೊಬೋ ಕಾಪ್‌ಗಳ ಮೆಮೊರಿ ರಿಫ್ರೆಷ್ ಮಾಡುವುದರ ಜೊತೆಗೆ ಈ ಪಡೆಯ ಸದಸ್ಯರ ಮೆಮೊರಿ ರಿಫ್ರೆಷ್ ಮಾಡಬೇಕಾಗಿ ಬಂದಿದೆ!'

'ಅವಿರತ್, ನನಗ್ಯಾಕೋ ಅವರ ತರಬೇತಿಗೆ ಮುನ್ನ ಪೂರ್ವ ತಯಾರಿಗೆ ಹೆಚ್ಚು ಸಮಯ ವಿನಿಯೋಗಿಸಬೇಕಾಗಿದೆ ಅನಿಸುತ್ತೆ.'

'ಡ್ರೈವಿಂಗ್ ಸ್ಕೂಲ್‌ನಲ್ಲಿ ಕೇವಲ ಚಾಲನೆಯ ಪಾಠವಷ್ಟೇ ಹೇಳಿಕೊಡುವುದಿಲ್ಲ ಹನ್ಸ್. ಈ ಪಡೆಯ ತರಬೇತಿಗಾಗಿ ಒಂದು ತಂಡ ರಚನೆಯಾಗಿರುವುದು ನಿನಗೆ ಗೊತ್ತಿರಬೇಕಲ್ಲ. ಕೊಂಚ ಅದರೆಡೆ ಗಮನ ಹರಿಸಿ ಎಲ್ಲಾ ಸಂದೇಹಗಳನ್ನು ಬದಿಗೊತ್ತಿ ನಾಳೆ ಉಲ್ಲಾಸದಿಂದ ಡ್ಯೂಟಿಗೆ ಹಾಜರಾಗು.'

'ಈ ವಿಚಾರದ ಬಗ್ಗೆ ನಾವು ಹೆಚ್ಚು ತಲೆ ಕೆಡಿಸಿಕೊಂಡಷ್ಟೂ ಗೋಜಲುಗಳು, ಪ್ರಶ್ನೆಗಳು ಹಾಗೇ ಉಳಿಯುತ್ತವೆ. ಎದುರಾಗಬಹುದಾದ ಸಮಸ್ಯೆಗಳ ನಿವಾರಣೆಗೆ ಪರಿಹಾರವನ್ನು ಆಡಳಿತ ವಿಭಾಗ ಮಾಡಿಯೇ ಇರುತ್ತೆ' ಎಂದು ವಿಶ್ವಾಸದಿಂದಲೇ ಪ್ರತಿಕ್ರಿಯಿಸಿದ ಹನ್ನಾ ಶುಭ ಹಾರ್ವೆಸಿ ಸಂಪರ್ಕ ಕಡಿದಳು.

ನಾಳೆ ತರುವ ಸವಾಲುಗಳನ್ನು ಎದುರಿಸಲು ಮೈಮನವನ್ನು ಸಿದ್ಧವಾಗಿಟ್ಟುಕೊಳ್ಳುವುದು ಅನಿವಾರ್ಯವಾಗಿತ್ತು. ಅವಳು ಅಪೇಕ್ಷಿಸದಿದ್ದರೂ ವೃತ್ತಿ ಬದುಕು ನೀಡುತ್ತಿದ್ದ ಅನುಭವ ಅವಳಿಗೆ ಅಮೂಲ್ಯ ಪಾಠವನ್ನು ನಿರಂತರ ಕಲಿಸುತ್ತಲೇ ಬಂದಿತ್ತು. ಅದನ್ನು ಸ್ವೀಕರಿಸುವುದು ಲಿಖಿತವಲ್ಲದ ನಿಯಮವಾಗಿತ್ತು.

* * *

ಹಿಂದಿನ ದಿನದ ಮಾತುಕತೆಯಂತೆ ಡ್ರೈವಿಂಗ್ ಸ್ಕೂಲ್‌ನಲ್ಲಿ ಅರೆಮಾನವ ಪಡೆಯ ಸದಸ್ಯರಿಗೆ ತರಬೇತಿ ಆಯೋಜಿಸಲಾಗಿದ್ದರೂ ಅವಳಂತೆ ಇತರ ಟ್ರಾಫಿಕ್ ವಾರ್ಡನ್‌ಗಳಿಗೂ ಬೇರೆಡೆ ಅದೇ ರೀತಿ ನಿಯೋಜಿಸಲಾಗಿತ್ತು. ಕೆಲಸವನ್ನು ತ್ವರಿತಗೊಳಿಸಿ ಆದಷ್ಟು ಬೇಗ ಈ ಪ್ರಕ್ರಿಯೆ ಪೂರ್ಣಗೊಳಿಸುವುದೇ ವಿಭಾಗದ ಉದ್ದೇಶವಿದ್ದಂತಿತ್ತು.

ಡ್ರೈವಿಂಗ್ ಸ್ಕೂಲ್‌ನ ರಿಸೆಪ್ಷನ್‌ನಲ್ಲಿದ್ದ ಸ್ವಾಗತಕಾರಿಣಿ ರೊಬೋಗೆ ನಿಯಂತ್ರಣ ಕೇಂದ್ರದ ಡೇಟಾ ಸೆಂಟರ್‌ನಿಂದ ಹಿಂದಿನ ದಿನ ರವಾನೆಯಾದ ಅರೆಮಾನವ ಪಡೆಯ ಸದಸ್ಯರ ವಿವರಗಳನ್ನು ಫೀಡ್ ಮಾಡಿ, ನಂತರ ತಂಡದಲ್ಲಿನ ಇತರ ಸದಸ್ಯರೊಂದಿಗೆ ಅಂದಿನ ಚಟುವಟಿಕೆಗಳ ವಿಶ್ಲೇಷಣೆಗೆ ಕೂತಳು.

ಅರೆಮಾನವ ಪಡೆಯ ಸದಸ್ಯರ ಪಟ್ಟಿ ಅವಳ ಕಂಪ್ಯೂಟರ್‌ನಿಂದ ಬಿಂಬಿತವಾಗಿ ವಿವಿಧ ಹಿನ್ನೆಲೆಯ ದೇಹಸ್ಥಿತಿಯನ್ನು ಬಿಂಬಿಸುತ್ತಿತ್ತು. ಒಬ್ಬನಂತೆ ಮತ್ತೊಬ್ಬನಿಲ್ಲ ಎಂಬ ಸ್ಥಿತಿ ನಿರ್ಮಾಣವಾದರೂ ಅವರ ಮನೋಭಾವದಲ್ಲಿನ ಸಮಾನತೆಯೇ ಅವರನ್ನು ಇಲ್ಲಿಗೆ ಕರೆತರಲು ಕಾರಣವಾಗಿತ್ತು.

ಅವಿರತ್‌ನಿಗೆ ಪ್ರಕರಣವೊಂದು ತನಿಖೆಗೆ ಬಂದಿದ್ದರಿಂದ ಅದನ್ನು ಮೊದಲು ಪರಿಗಣಿಸಿ ನಂತರ ತಂಡವನ್ನು ತಡವಾಗಿ ಕೂಡಿಕೊಂಡಿದ್ದ.

ಶುಭ ಹಾರ್ವೆಸಿ ಅವರ ಬಳಿ ಆಸೀನನಾಗಿ ಪಡೆಯ ಸದಸ್ಯರ ಕಡೆ ಕಣ್ಣು ಹಾಯಿಸಿದಾಗ ಅವನಿಗೊಂದು ವಿಚಿತ್ರ ಕಂಡಿತ್ತು.

'ಅವರ ಹೆಸರುಗಳಲ್ಲಿನ ವಿಶೇಷತೆ ಗಮನಿಸಿದಿರಾ?' ಬದಿಯಲ್ಲಿದ್ದ ಹನ್ನಾ ಊಹಿಸಿದಂತೆ ಕೇಳಿದಳು.

'ಹೌದು... ನಾನು ಗುಪ್ತಚರ ಇಲಾಖೆಯವನಲ್ಲ. ಆದರೆ ಆ ಇಲಾಖೆಯವರಿಗೆ ಯಾಕೆ ಈ ವಿಷಯ ಗಮನಕ್ಕೆ ಬಂದಿಲ್ಲವೋ?'